ರೇಗುತ್ತಿದ್ದೇನೆ? ಅವನು ಗುಡ್ ನೈಟ್ ಹೇಳಿ ಹಾಗೆಯೇ ಮರಳಿ ಹೋಗಿದ್ದಕ್ಕಾ? ನನ್ನನ್ನು ನಾನೇ ಪ್ರಶ್ನಿಸಿಕೊಂಡೆ. ಒಂದು ವೇಳೆ ಅವನು ರಾತ್ರಿ ಉಳಿಯುವ ಬಗ್ಗೆ ಹೇಳದಿದ್ದರೆ, ಕಡೇಪಕ್ಷ ಒಂದು 'ಗುಡ್ ನೈಟ್ ಕಿಸ್' ತೆಗೆದುಕೊಂಡು ಹೋಗಬಹುದಿತ್ತಲ್ಲ? ಓಹ್! ನಾನೇನು ಯೋಚಿಸುತ್ತಿದ್ದೇನೆ? ನನ್ನಿಡೀ ಶರೀರ ಕಂಪಿಸಿತು. ಅದೇ ವೇಳೆಗೆ ಮೊಬೈಲ್ ರಿಂಗಾಯಿತು. ಮೊಬೈಲ್ ನೋಡಿದೆ, ವಿಶಾಲ್ ಕಾಲ್ ಮಾಡಿದ್ದ.

'ಹಲೋ'

'ನಾನು ಬಾಗಿಲ ಬಳಿ ನಿಂತಿದ್ದೇನೆ, ದಯವಿಟ್ಟು ಬಾಗಿಲು ತೆರೆಯಿರಿ', ವಿಶಾಲ್ ಪಿಸುಗುಟ್ಟಿದ. ಮೊಬೈಲ್ ಕೈಯಿಂದ ಜಾರಿ ಬೀಳುವುದನ್ನು ಹೇಗೋ ಸಂಭಾಳಿಸಿದೆ. ನನ್ನ ಕಿವಿಯನ್ನು ನಾನೇ ನಂಬದಾದೆ. ಬಾಗಿಲನ್ನು ತೆರೆದು ನೋಡಲೋ, ಬೇಡವೋ? ನನ್ನ ಹೃದಯದ ಬಡಿತ ಹೆಚ್ಚಿತ್ತು. ಹಣೆಯಲ್ಲಿ ಬೆವರು ಮೂಡಿತು. ನಾನು ಮೆಲ್ಲನೆ ಬಾಗಿಲು ತೆರೆದೆ. ಎದುರಿಗೆ ವಿಶಾಲ್ ನಿಂತಿದ್ದ. ಬಾಗಿಲು ತೆರೆಯುತ್ತಲೇ ಅವನು ಕೋಣೆಗೆ ಬಂದ. ಬೆನ್ನಿನಿಂದ ಬಾಗಿಲನ್ನು ಮುಚ್ಚಿ ನನ್ನನ್ನು ತನ್ನ ಬಾಹುಗಳಲ್ಲಿ ಬಂಧಿಸಿಕೊಂಡ. ನಾನು ಕನಸು ಕಾಣುತ್ತಿಲ್ಲ ತಾನೇ? ನನಗೆ ನಂಬಿಕೆಯೇ ಆಗುತ್ತಿರಲಿಲ್ಲ. ಒಂದು ಕ್ಷಣದ ಹಿಂದೆ ಇದಕ್ಕಾಗಿಯೇ ವಿಶಾಲನ ಬಗ್ಗೆ ರೇಗುತ್ತಿದ್ದೆ, ಅದೇ ಒಂದು ಕ್ಷಣದ ನಂತರ ಅವನ ಬಾಹುಗಳಲ್ಲಿದ್ದೆ!

ವಿಶಾಲ್ ತನ್ನ ಮನಸ್ಸಿನಲ್ಲಿದ್ದ ಹಿಂಜರಿಕೆಯನ್ನು ಹೊರಗೇ ಬಿಟ್ಟು ಬಂದಿದ್ದ. ನಮ್ಮ ಉಸಿರಾಟ ತೀವ್ರವಾಯಿತು. ಬಿರುಗಾಳಿಯೊಂದು ನಮ್ಮಿಬ್ಬರನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಿತ್ತು. ನಾನು ಅವನಿಂದ ಬಿಡಿಸಿಕೊಂಡು ಬಾಗಿಲ ಚಿಲಕ ಹಾಕಿದೆ. ನಂತರ ಅವನ ಬಳಿಗೆ ಬಂದು ಅವನ ಬಾಹುಗಳಲ್ಲಿ ಬಂಧಿಯಾದೆ. ಈ ಬಿರುಗಾಳಿ ಸುನಾಮಿಗಿಂತ ಕಡಿಮೆ ಇರಲಿಲ್ಲ. ಈ ಸುನಾಮಿಯ ಅಲೆಗಳು ಅಕಸ್ಮಾತ್ ಎದ್ದು, ನಮ್ಮಿಬ್ಬರ ಸಂಕೋಚ, ಧೈರ್ಯ ಮತ್ತು ದೂರಗಳನ್ನು ಕೊಚ್ಚಿಕೊಂಡು ಹೋಯಿತು. ಬಿರುಗಾಳಿ ನಿಂತ ನಂತರ ಅವನು ತನ್ನ ಬಟ್ಟೆಗಳನ್ನು ಸರಿಪಡಿಸಿಕೊಂಡ. ನಾನೂ ನನ್ನ ಬಟ್ಟೆಗಳನ್ನು ಸರಿಪಡಿಸಿಕೊಂಡೆ. ನಂತರ ಅವನು ನನ್ನನ್ನು ನೋಡುತ್ತಾ, ನನ್ನ ಹೆಗಲುಗಳನ್ನು ಹಿಡಿದು ನನ್ನ ಹಣೆಯನ್ನು ತೃಪ್ತಿಗೊಂಡಂತೆ ಚುಂಬಿಸಿದ.

'ನಾಳೆ ಭೇಟಿಯಾಗ್ತೇನೆ' ಎಂದು ವಿಶಾಲ್ ಮೆಲ್ಲನೆ, ಸದ್ದಾಗದಂತೆ ಚಿಲಕವನ್ನು ತೆಗೆದ. ಹೊರಗೆ ಮೌನ ಕವಿದಿತ್ತು. ವಿಶಾಲ್ ಹೊರಟು ಹೋದ. ಆಗ ನಾನು, ಅದೇಕೋ ಏನೋ ರಿತಿಕ್‌ನ ವಿರುದ್ಧ ನನ್ನೊಳಗೆ ಇನ್ನಷ್ಟು ಧೈರ್ಯ ಮತ್ತು ಗಟ್ಟಿತನವನ್ನು ಮನಗಾಣುತ್ತಿದ್ದೆ. ಬಹುಶಃ ಸಂಜೆಯಿಂದಲೇ ಯಾವ ಜೊತೆಗಾಗಿ ನಾನು ಹಂಬಲಿಸುತ್ತಿದ್ದೆನೋ, ಅದು ನನಗೆ ಲಭಿಸಿತ್ತು. ವಿಶಾಲನ ಜಾಗದಲ್ಲಿ ರಿತಿಕ್ ಇದ್ದಿದ್ದರೆ, ಅವನು ಹೀಗೆ, ಇಷ್ಟು ಸುಂದರವಾಗಿ ಎಲ್ಲವನ್ನೂ ಮಾಡುತ್ತಿದ್ದನೇ? ಓಹ್! ಮತ್ತೆ ರಿತಿಕ್! ನಾನೇಕೆ ವಿಶಾಲನನ್ನು ಅವನೊಂದಿಗೆ ಹೋಲಿಸುತ್ತೇನೆ? ನಾನು ಅವನನ್ನು ನನ್ನ ನೆನಪುಗಳಿಂದ ಹೊರಹಾಕಲೇಬೇಕು, ಇಲ್ಲದಿದ್ದಲ್ಲಿ ನಾನು ಬೇರೆಯವನನ್ನು ಪೂರ್ಣವಾಗಿ ಹೇಗೆ ಸ್ವೀಕರಿಸಲು ಸಾಧ್ಯ?

ಮತ್ತೊಮ್ಮೆ ನನ್ನ ಜೀವನ ಅದೇ ಮಾರ್ಗದಲ್ಲಿ ಮುಂದುವರೆಯಿತು. ಈಗ ನಾನು ಮತ್ತೊಮ್ಮೆ, ನಾನು ವೈವಾಹಿಕ ಜೀವನವನ್ನು ಒಪ್ಪಿಕೊಳ್ಳಬೇಕೋ ಅಥವಾ ಗಂಧರ್ವ ವಿವಾಹದಂತೆ 'ಲಿವ್ ಇನ್ ರಿಲೇಶನ್' ಒಪ್ಪಿಕೊಳ್ಳಬೇಕೋ ಎಂಬುದನ್ನು ನಿರ್ಧರಿಸಬೇಕಿತ್ತು. ಗಂಧರ್ವ ವಿವಾಹ ಸಹ 'ಲಿವ್ ಇನ್ ರಿಲೇಶನ್' ರೀತಿಯಲ್ಲಿಯೇ ಇತ್ತು; ಒಬ್ಬರು ಇನ್ನೊಬ್ಬರನ್ನು ಜೀವನ ಸಂಗಾತಿಯೆಂದು ತಿಳಿದು ಜೊತೆಯಲ್ಲಿರುವುದು. ಇದನ್ನು ವಿವಾಹದ ಒಂದು ಪ್ರಕಾರವೆಂದು ತಿಳಿಯಲಾಗುತ್ತಿತ್ತು, ಇದಕ್ಕೆ ಸಾಮಾಜಿಕ ಮಾನ್ಯತೆ ಸಹ ಇತ್ತು. ಸಂಬಂಧಗಳಲ್ಲಿ ಇಂಥ ಸ್ವಾತಂತ್ರ್ಯವಿದ್ದಾಗ್ಯೂ 'ವಿವಾಹ' ಶಬ್ದ ಆಗಲೂ ಅದರೊಂದಿಗೆ ಕಲೆತಿತ್ತು. ಸರಿ, ಇದು ನನ್ನ ಜೀವನ, ಇದನ್ನು ನನ್ನದೇ ಆದ ರೀತಿಯಲ್ಲಿ ಸಾಗಿಸುವ ಅಧಿಕಾರ ನನಗಿರಬೇಕು, ಇದಕ್ಕಾಗಿ ನಾನು ಕಸಬಾ ಬಂಧನಗಳಿಂದ ಹೋರಾಡುವ ಪರಿಸ್ಥಿತಿ ಎದುರಾಗಲಿ, ವಿಶಾಲ್‌ನಲ್ಲಿ ಧೈರ್ಯವಿದ್ದರೆ ನಾನು ಮತ್ತೊಮ್ಮೆ ಜೀವನ ಸಾಗಿಸಿ ನೋಡುತ್ತೇನೆ.

ನನ್ನೊಳಗಿನ ಹೆಣ್ಣು ರಿತಿಕ್‌ನ ನೆನಪುಗಳಿಂದ ಹೊರಬಂದು ಮತ್ತೊಮ್ಮೆ ಸಂಕೀರ್ಣ ಪರಂಪರೆಗಳ ಕಸಬಾ ಮಾನಸಿಕತೆಯನ್ನು ಲೆಕ್ಕಿಸದೆ ನನ್ನನ್ನು ಅಳೆಯಲಾರಂಭಿಸಿದಳು.

(ಮುಗಿಯಿತು)

ಪ್ರತಿಕ್ರಿಯಿಸಿ: feedback@sudha.co.in

## ಹೊಸ ಧಾರಾವಾಹಿ

# ನಂಬಿಕೆಯ ನೂಲು

**ಲೇಖಕ, ಕಥೆಗಾರ**

**ಬಸು ಬೇವಿನಗಿಡದ ಅವರು ಬರೆದ**

'ನಂಬಿಕೆಯ ನೂಲು' ಕಾದಂಬರಿ ಮಾಯಕ್ಕ ಎನ್ನುವ ಗ್ರಾಮೀಣ ಮಹಿಳೆಯೊಬ್ಬಳ ದಿಟ್ಟ ಹೋರಾಟವನ್ನು ಚಿತ್ರಿಸುತ್ತದೆ. ಮಲ್ಲೂರಿನಲ್ಲಿ ಹೊಟೇಲ್ ನಡೆಸುವ ದೇವಪ್ಪ ಮದುವೆಯೊಂದರ ಅಡುಗೆ ಮಾಡಲು ಎಕ್ಕೇರಿಗೆ ಹೋದಾಗ ಸಹಾಯಕಳಾಗಿ ಬಂದಿದ್ದ ಮಾಯಕ್ಕಳನ್ನು ಪ್ರೀತಿಯಿಂದ ಗೆಲ್ಲುತ್ತಾನೆ. ಮದುವೆಯಾಗಿ ಬಂದರೂ ಊರು ಅವಳನ್ನು ಓಡಿಬಂದವಳೆಂದು ಹೇಳಿದಾಗ ಆಕೆ ತೀವ್ರವಾಗಿ ನಲುಗುತ್ತಾಳೆ. ದೇವಪ್ಪನಿಗೆ ಹಿಂದೆ ಮದುವೆಯಾಗಿತ್ತೆಂದು ತಿಳಿದಾಗಲಂತೂ ಆಕೆಗೆ ತೀವ್ರ ಆಘಾತವಾಗುತ್ತದೆ. ಅನಸೂಯೆ ಅವನ ಕಾಟಕ್ಕೆ ತವರುಮನೆಗೆ ಹೋಗಿದ್ದಾಳೆಂದು ತಿಳಿಯುತ್ತದೆ. ಅವಳು ಬಹುಶಃ ಕಂಡಕ್ಟರ್‌ನೊಂದಿಗೆ ಓಡಿಹೋಗಿರಬಹುದೆಂಬ ಗುಮಾನಿ ದೇವಪ್ಪನ ಮನಸ್ಸಿನಲ್ಲಿದೆ. ತನ್ನ ಮತ್ತು ಗಂಡನ ನಡುವೆ ಎಷ್ಟೆಲ್ಲ ವ್ಯತ್ಯಾಸಗಳಿವೆ ಎಂದು ತಿಳಿದಾಗ ಮಾಯಕ್ಕನಿಗೆ ಅಚ್ಚರಿ! ಮೊದಲು ಪ್ರೀತಿಸುವಾಗ ಇವೆಲ್ಲ ಗೊತ್ತೇ ಇರಲಿಲ್ಲ! ಓಡಿಬಂದವಳು, ಗಂಡನಿಗೆ ಕದ್ದು ಮುಚ್ಚಿ ಮೋಸ ಮಾಡುವವಳು, ರಿಕಾಮಿ ತಿರುಗುವ ಶಿವಣ್ಣನ ಜೊತೆ ಅದೇನು ಸಲುಗೆ ಎನ್ನುವ ಮಾತು ಅವಳ ಸುತ್ತಲಿನ ಗಾಳಿಯಲ್ಲಿ ಇದ್ದೇ ಇವೆ.

ಮೊದಮೊದಲು ಅವಳನ್ನು ತುಳಿಯಲು ನೋಡುವ ಊರು, ನಂತರ ಆಕೆ ರಾಜಕೀಯದಲ್ಲಿ ಏಳಿಗೆ ಕಂಡಕೂಡಲೆ ಅವಳನ್ನು ಮೆಚ್ಚಿಸಲು ತೊಡಗುತ್ತದೆ. ಈ ಕಾದಂಬರಿಯ ನಾಯಕಿ ಮಾಯಕ್ಕನ ಹೋರಾಟ ಹಲವು ಬಗೆಯದು. ಗಂಡನ ತಾತ್ಸಾರ, ಕುಟುಂಬದಲ್ಲಿನ ಕುಹಕ, ನೆರೆಮನೆಯವರ ಅಸೂಯೆ ಮತ್ತು ಎದುರಾಳಿ ಪಕ್ಷದಲ್ಲಿನ ರಾಜಕೀಯ ಮೇಲುಗಾರಿಕೆಯ ಸವಾಲುಗಳು ಅವಳ ಮುಂದಿವೆ. ಅವಳ ಸಾತ್ವಿಕ ರೋಷಕ್ಕೆ ನಾಗಣ್ಣ, ಶಿವಣ್ಣ ಮತ್ತು ದುಂಡಪ್ಪ ಕಾರಂತಹ ಹೃದಯವಂತರು ಬೆಂಬಲವಾಗಿ ನಿಲ್ಲುತ್ತಾರೆ. ಮೈದುನ ಸಿದ್ದು ಮಾಯಕ್ಕನ ನಂಬಿಕೆಗೆ ಅರ್ಹನಾದನೆ? ದೇವಪ್ಪ ಮತ್ತು ಮಾಯಕ್ಕಳ ದಾಂಪತ್ಯದಲ್ಲಿನ ಬಿರುಕು ಆಳವಾಯಿತೆ? ಬಲಾಢ್ಯರನ್ನು ಎದುರು ಹಾಕಿಕೊಂಡು ಆಕೆ ಗೆಲ್ಲಬಲ್ಲಳೆ? ಇಂತಹ ಹಲವು ಸಂಗತಿಗಳನ್ನು ಈ ಕಾದಂಬರಿ ಅನೇಕ ತಿರುವುಗಳ ಮೂಲಕ ಶೋಧಿಸುತ್ತದೆ. ನಂಬಿಕೆಯ ನೂಲು ನೇಯಲಾರದ ಜನರ ವಿಶ್ವಾಸ ಗಳಿಸುವುದು ಅಸಾಧ್ಯ ಎಂಬುದು ಮಾಯಕ್ಕಳಿಗೆ ಮನವರಿಕೆಯಾಗಿದೆ.

ಕಥೆ, ಕಾದಂಬರಿಗಳ ಮೂಲಕ ಕನ್ನಡ ಓದುಗರ ಗಮನಸೆಳೆದ ಕಥೆಗಾರ ಬಸು ಬೇವಿನಗಿಡದ ಅವರು ರೋಚಕವಾಗಿ ಬರೆದ ಸಾಮಾಜಿಕ ಧಾರಾವಾಹಿ.

**ಮುಂದಿನ ವಾರ ಆರಂಭ...**